ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಶಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ
ದಿನಾಂಕ : DATE : 5/4/21

# ಶಿಕ್ಷಕರ ವರ್ಗಕ್ಕೆ ಸುಗ್ರೀವಾಜ್ಞೆ?

## 3 ವರ್ಷದಿಂದ ಬಗೆಹರಿಯದ ಬವಣೆ । ಮುಂದಿನ ಸಂಪುಟ ಸಭೆಯಲ್ಲಿ ಪ್ರಸ್ತಾವನೆ

■ ವಿಲಾಸ ಮೇಲಗಿರಿ ಬೆಂಗಳೂರು

ವರ್ಗಾವಣೆಗಾಗಿ ಮೂರು ವರ್ಷಗಳಿಂದ ಕಾಯುತ್ತಿರುವ ಶಿಕ್ಷಕರ ಬೇಡಿಕೆ ಈಡೇರಿಸುವ ವಿಚಾರದಲ್ಲಿ ಪದೇಪದೆ ಗೊಂದಲಕ್ಕೆ ಸಿಲುಕುತ್ತಿರುವ ರಾಜ್ಯ ಸರ್ಕಾರ ಕೊನೆಗೂ ಸುಗ್ರೀವಾಜ್ಞೆ ಅಸ್ತ್ರ ಹಿಡಿಯುವ ತೀರ್ಮಾನದತ್ತ ಮುಖ ಮಾಡಿದೆ. ಕಳೆದ ವರ್ಷ ಕಡ್ಡಾಯ ಮತ್ತು ಹೆಚ್ಚುವರಿ ವ್ಯಾಪ್ತಿಗೆ ಬರುವ 3000 ಶಿಕ್ಷಕರಿಗೆ ಸಚಿವರು ಮತ್ತು ವಿಧಾನ ಪರಿಷತ್ ಸದಸ್ಯರು ನೀಡಿರುವ ಭರವಸೆ ಈಡೇರಿಸುವ ಉದ್ದೇಶದಿಂದ ಮುಂಬರುವ ಸಂಪುಟ ಸಭೆಯಲ್ಲಿ ಸುಗ್ರೀವಾಜ್ಞೆ ಪ್ರಸ್ತಾವನೆ ಮಂಡನೆಯಾಗಲಿದೆ ಎಂದು ಮೂಲಗಳು ತಿಳಿಸಿವೆ.

ರಾಜ್ಯದಲ್ಲಿ ಸುಮಾರು 1.63 ಲಕ್ಷ ಪ್ರಾಥಮಿಕ ಹಾಗೂ 35,000 ಪ್ರೌಢಶಾಲಾ ಶಿಕ್ಷಕರಿದ್ದಾರೆ. ಈ ಪೈಕಿ 72 ಸಾವಿರ ಶಿಕ್ಷಕರು ವರ್ಗಾವಣೆಗೆ ಅರ್ಜಿ ಗುಜರಾಯಿಸಿದ್ದಾರೆ. ಹಾಗೆಂದ ಮಾತ್ರಕ್ಕೆ ಎಲ್ಲರಿಗೂ ವರ್ಗಾವಣೆ ಸಿಗುವುದಿಲ್ಲ. ಶೇ.5 ವರ್ಗಾವಣೆಗೆ ಮಾತ್ರ ಕಾಯ್ದೆಯಲ್ಲಿ ಅವಕಾಶವಿದೆ. ಆದರೆ, ಶಿಕ್ಷಕರ ಈ ಬೇಡಿಕೆ ಈಡೇರಿಕೆ ವಿಚಾರದಲ್ಲಿ ವಿಳಂಬವಂತೂ ಆಗುತ್ತಿದೆ. ಪ್ರತಿ ವರ್ಷ ಏಪ್ರಿಲ್, ಮೇನಲ್ಲಿ ವರ್ಗಾವಣೆ ಮಾಡಬೇಕೆಂಬ ಕಾಯ್ದೆ ಇದೆ. ಆದರೆ, ಆ ಗಡುವಿನ ಒಳಗೆ ವರ್ಗಾವಣೆಯಾದ ಉದಾಹರಣೆಯೇ ಇಲ್ಲ! ಸರ್ಕಾರಿ ನೌಕರರಲ್ಲಿ ಶಿಕ್ಷಕರೇ ಹೆಚ್ಚಿನ ಸಂಖ್ಯೆಯಲ್ಲಿದ್ದು, ಶಿಕ್ಷಕರ ವರ್ಗಾವಣೆಗೆ ಕೌನ್ಸಿಲಿಂಗ್ ನೀತಿ ಜಾರಿಗೆ ತಂದು 14 ವರ್ಷ ಉರುಳಿದರೂ ಗೊಂದಲ ಬಗೆಹರಿದಿಲ್ಲ.

**ವಿಜಯವಾಣಿ ವಿ|ಶೇ|ಷ**

» **ಅಧ್ಯಾಪಕ-ಸಿಬ್ಬಂದಿಗೆ ನೀಡಿದ್ದ ಭರವಸೆಗೆ ಶೀಘ್ರ ಅನುಮೋದನೆ**

**ಶಿಕ್ಷಕಸ್ನೇಹಿ ವರ್ಗಾವಣೆ ಎಲ್ಲಿ?:** ಸುರೇಶ್ ಕುಮಾರ್ ಶಿಕ್ಷಣ ಸಚಿವರಾಗಿ ಎರಡು ವರ್ಷದಿಂದ ಶಿಕ್ಷಕಸ್ನೇಹಿ ವರ್ಗಾವಣೆ ಬಗ್ಗೆ ಹೇಳುತ್ತಲೇ ಇದ್ದಾರೆ. ಆದರೆ, ಅದು ಜಾರಿಯಾಗುವುದು ಯಾವಾಗ? ಶಿಕ್ಷಣ ಇಲಾಖೆಯಲ್ಲೇ ಬೋಧಕೇತರ ಸಿಬ್ಬಂದಿ ವರ್ಗಾವಣೆ ಸುಲಭವಾಗಿ ನಡೆಯುತ್ತವೆ. ನಮಗೇಕೆ ಕಾಯ್ದೆ ನೆಪದಲ್ಲಿ ಶಿಕ್ಷೆ ಎಂದು ವರ್ಗಾವಣೆಗೆ ಕಾತರರಾಗಿರುವ ಶಿಕ್ಷಕರು ಕೇಳುತ್ತಿದ್ದಾರೆ. ಬಯಸಿದ ಕಡೆ ವರ್ಗಾವಣೆ ಕೊಟ್ಟರೆ ಶಿಕ್ಷಕರ ಕುಟುಂಬಕ್ಕೂ ನೆಮ್ಮದಿ ದೊರೆಯುತ್ತದೆ. ಶಿಕ್ಷಣ ಸುಧಾರಣೆಗೂ ಸಹಕಾರಿಯಾಗುತ್ತದೆ. ಇದೇಕೆ ಸರ್ಕಾರಕ್ಕೆ ಅರ್ಥವಾಗುತ್ತಿಲ್ಲ ಎಂಬುದು ಶಿಕ್ಷಕರ ಪ್ರಶ್ನೆ. ○ಪುಟ 4



### ವಿಳಂಬ ಏಕೆ?

ವರ್ಗಾವಣೆ ವಿಚಾರದಲ್ಲಿ ಅನೇಕರು ಕೋರ್ಟ್ ಮೆಟ್ಟಿಲೇರಿ ದ್ದಾರೆ. ನ್ಯಾಯಾಲಯಗಳು ವರ್ಗಾವಣೆ ಕಾಯ್ದೆ ಪಾಲಿಸುವಂತೆ ಸರ್ಕಾರಕ್ಕೆ ಸ್ಪಷ್ಟ ಸೂಚನೆ ನೀಡಿದ್ದೂ ಆಗಿದೆ. ಆದರೆ, ಕಡ್ಡಾಯ ಮತ್ತು ಹೆಚ್ಚುವರಿ ಶಿಕ್ಷಕರ ವಿಷಯದಲ್ಲಿ ಶಿಕ್ಷಣ ಸಚಿವರು ಸುಗ್ರೀವಾಜ್ಞೆ ಮೂಲಕ ಪರಿಹಾರ ಕಲ್ಪಿಸಲು ಹೊರಟಿದ್ದಾರೆ ಎನ್ನಲಾಗಿದೆ. ಈ ಕಾರಣಕ್ಕಾಗಿ ವರ್ಗಾವಣೆ ವಿಳಂಬವಾಗಿದೆ.

**1.63** ಲಕ್ಷ, ರಾಜ್ಯದ ಪ್ರಾಥಮಿಕ ಶಾಲಾ ಶಿಕ್ಷಕರು

**35000** ಪ್ರೌಢಶಾಲಾ ಶಿಕ್ಷಕರು

**72000** ವರ್ಗಾವಣೆಗೆ ಬಂದಿರುವ ಅರ್ಜಿ

**5%** ವರ್ಗಾವಣೆಗಿರುವ ಅವಕಾಶ

### ವರ್ಗ ಸಿಗದೆ ವಿಚ್ಛೇದನ!

ಬೇರೆ ಬೇರೆ ಭಾಗಗಳ ಅನೇಕ ಶಿಕ್ಷಕರು 15-20 ವರ್ಷಗಳಿಂದ ಕಲ್ಯಾಣ ಕರ್ನಾಟಕ ಭಾಗದಲ್ಲೇ ಇದ್ದಾರೆ. ಇವರಲ್ಲಿ ಅನೇಕರು ತಂದೆ-ತಾಯಿ, ಕುಟುಂಬದಿಂದ ದೂರ ಉಳಿದಿದ್ದಾರೆ. ವರ್ಗಾವಣೆ ಕಾರಣಕ್ಕಾಗಿಯೇ ವಿವಾಹ ವಿಚ್ಛೇದನ ಮಾಡಿಕೊಂಡ ಉದಾಹರಣೆಗಳೂ ಇವೆ! ಒಬ್ಬಿಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದೂ ಉಂಟು. ಆದರೂ ಸರ್ಕಾರ ವರ್ಗಾವಣೆಗೆ ಸ್ಪಷ್ಟ ರೂಪ ಕೊಡುತ್ತಿಲ್ಲ ಎಂಬ ಆಕ್ಷೇಪ ಇದೆ.

### ತಿದ್ದುಪಡಿ ಆಗಲಿ

ಶಿಕ್ಷಕರ ವರ್ಗಾವಣೆ ಗೊಂದಲ ಸರಿ ಹೋಗಬೇಕಾದರೆ ವೃಂದ ಮತ್ತು ನೇಮಕ ನಿಯಮ(ಸಿ ಅಂಡ್ ಆರ್) ವೂ ತಿದ್ದುಪಡಿಯಾಗಬೇಕು. ಆಗ ಮಾತ್ರ ಸಮಸ್ಯೆಗೆ ಸ್ಪಷ್ಟ ಪರಿಹಾರ ಸಾಧ್ಯ ಎಂಬ ಅಭಿಪ್ರಾಯವೂ ಇದೆ.

### ಬೇಡಿಕೆಗಳೇನು?

- ಕಲ್ಯಾಣ ಕರ್ನಾಟಕ ಭಾಗದಲ್ಲಿ 10 ವರ್ಷ ಸೇವೆ ಸಲ್ಲಿಸಿದವರನ್ನು ಮಾತ್ರ ವರ್ಗಾವಣೆಗೆ ಪರಿಗಣಿಸಬೇಕು
- ಪರಸ್ಪರ ವರ್ಗಾವಣೆಗೆ 7 ವರ್ಷ ಪೂರೈಸಿರಬೇಕು
- ಶೇ.25 ಹುದ್ದೆ ಖಾಲಿ ಇರುವ ತಾಲೂಕುಗಳಿಂದ ವರ್ಗಾವಣೆ ಇಲ್ಲ ಎಂಬ ನಿಯಮ ತೆಗೆದು ಹಾಕಬೇಕು.

ಕೋರಿಕೆ ಹಾಗೂ ಪರಸ್ಪರ ವರ್ಗಾವಣೆಗೆ ಸರ್ಕಾರ ಕೋರ್ಟ್‌ನಿಂದ ಪೂರ್ವಾನುಮತಿ ಪಡೆಯಬೇಕು. ಗಂಭೀರ ಕಾಯಿಲೆಯುಳ್ಳವರು, ವಿಧವಾ ಶಿಕ್ಷಕಿಯರು, ವಿಕಲಚೇತನರು, ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ಮಾಜಿ ಸೈನಿಕರ ವರ್ಗಾವಣೆಯನ್ನು ಮಾನವೀಯ ದೃಷ್ಟಿಯಿಂದ ಪರಿಗಣಿಸಬೇಕು.

| ಅಶೋಕ ಎಂ. ಸಜ್ಜನ
ರಾಜ್ಯಾಧ್ಯಕ್ಷ, ಸರ್ಕಾರಿ ಗ್ರಾಮೀಣ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ.

### 10ನೇ ತರಗತಿ ಭೌತಿಕ ಬೋಧನೆ ಸ್ಥಗಿತ

ಬೆಂಗಳೂರು: ಕರೊನಾ ಕಾರಣಕ್ಕೆ 6- 9ನೇ ತರಗತಿ ಭೌತಿಕ ಬೋಧನೆಯನ್ನು ರಾಜ್ಯ ಸರ್ಕಾರ ಸ್ಥಗಿತ ಮಾಡಿದೆ. ಆದರೆ, ಬಹುತೇಕ ಶಾಲೆಗಳು 10ನೇ ತರಗತಿಗೂ ಭೌತಿಕ ಬೋಧನೆ ರದ್ದು ಮಾಡಿ ಆನ್‌ಲೈನ್ ಕ್ಲಾಸ್‌ಗೆ ಜೈ ಎಂದಿವೆ. ○ ವಿವರ ಪುಟ 10

# ವರ್ಗಕ್ಕೆ ಸುಗ್ರೀವಾಜ್ಞೆ?

ಮೊದಲನೇ ಪುಟದಿಂದ...

**ಬೇಡಿಕೆ ಪರಿಗಣಿಸಿ:** ಸರ್ಕಾರ ಶಿಕ್ಷಕರ ವರ್ಗಾವಣೆಗೆ ಸುಗ್ರೀವಾಜ್ಞೆ ಜಾರಿಗೆ ತಂದಲ್ಲಿ ಶಿಕ್ಷಕರ ಪ್ರಮುಖ ಬೇಡಿಕೆಗಳನ್ನು ಪರಿಗಣಿಸಬೇಕೆಂಬುದು ಶಿಕ್ಷಕರ ಒತ್ತಾಸೆ.

**ಸಿಆರ್‌ಪಿ/ಬಿಆರ್‌ಪಿ ಇಲ್ಲ ವರ್ಗ:** ರಾಜ್ಯದಲ್ಲಿ ಸಾಮಾನ್ಯ ಶಿಕ್ಷಕರಿಗೆ ಮಾತ್ರವಲ್ಲ, ಸಿ.ಆರ್.ಪಿ. ಹಾಗೂ ಬಿ.ಆರ್.ಪಿ. ಶಿಕ್ಷಕರಿಗೂ ವರ್ಗಾವಣೆ ಭಾಗ್ಯ ಸಿಕ್ಕಿಲ್ಲ. 3 ವರ್ಷ ಪೂರೈಸಿದವರು ಪುನಃ ಶಾಲೆಗೆ ಹೋಗಬಹುದು. 5 ವರ್ಷ ಸೇವೆ ಸಲ್ಲಿಸಿದ ಸಿ.ಆರ್.ಪಿ. ಮತ್ತು ಬಿ.ಆರ್.ಪಿ.ಗಳು ಕಡ್ಡಾಯವಾಗಿ ಪಾಠ ಮಾಡಲು ಶಾಲೆಗೆ ಹೋಗಬೇಕು. ಆದರೆ, ಅವರ ವರ್ಗಾವಣೆಗೂ ಬ್ರೇಕ್ ಬಿದ್ದಿದೆ.

**ಹಿಂದಿ ಶಿಕ್ಷಕರು ಹಿಂದೆ:** ವರ್ಗಾವಣೆ ಕಾಯ್ದೆಯಲ್ಲಿನ ಲೋಪದಿಂದ ಈವರೆಗೆ ಒಬ್ಬ ಹಿಂದಿ ಶಿಕ್ಷಕ ವರ್ಗಾವಣೆ ಆಗಿಲ್ಲ! ಈ ಶಿಕ್ಷಕರ ಪಾಡು ಕೇಳುವವರೇ ಇಲ್ಲ.

## ಪ್ರತಿಪಕ್ಷಗಳ ನಡೆ ಏನು?

**ಗೋ**ಹತ್ಯೆ ನಿಷೇಧ ಕಾಯ್ದೆ ಸೇರಿದಂತೆ ಅನೇಕ ಕಾಯ್ದೆಗಳನ್ನು ಸರ್ಕಾರ ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸುತ್ತಿರುವುದಕ್ಕೆ ಪ್ರತಿಪಕ್ಷಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿವೆ. ಈಗ ವಿಧಾನ ಮಂಡಲದಲ್ಲಿ ಯಾವುದೇ ಚರ್ಚೆ ಇಲ್ಲದೆ ಶಿಕ್ಷಕರ ವರ್ಗಾವಣೆ ವಿಷಯ ಕುರಿತು ಸುಗ್ರೀವಾಜ್ಞೆ ಮೂಲಕ ಕಾಯ್ದೆ ಜಾರಿಗೊಳಿಸಿದರೆ ಪ್ರತಿಪಕ್ಷಗಳು ಯಾವ ರೀತಿ ಪ್ರತಿಕ್ರಿಯಿಸುತ್ತವೆ ಎಂಬುದು ಕುತೂಹಲಕಾರಿಯಾಗಿದೆ.